ನವಸಾಕ್ಷರ ಪುಸ್ತಕ ಮಾಲೆ ೯೪

ಬದುಕಿನ ದಾರಿಗಳು

ಎ. ಕೆ. ಮೋಹನ್



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಅಧ್ಯಕ್ಷರು
ಡಾ. ಚಂದ್ರಶೇಖರ ಕಂಬಾರ
ಕುಲಪತಿಗಳು, ಕನ್ನಡ ವಿಶ್ವವಿದ್ಯಾಲಯ

ಶ್ರೀ ಲೂಕೋಸ್ ವಲ್ಲತರೈ ಐ. ಎ. ಎಸ್.
ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಉನ್ನತ ಸಲಹಾ ಸಮಿತಿ ಸದಸ್ಯರು

ಶ್ರೀಯುತರಾದ
ಹಾ. ಮಾ. ನಾಯಕ
ಎಚ್. ನರಸಿಂಹಯ್ಯ
ಜಿ. ನಾರಾಯಣ
ಎಲ್. ಎಸ್. ಶೇಷಗಿರಿರಾವ್
ಶಾಂತರಸ
ಕೆ. ವಿ. ಸುಬ್ಬಣ್ಣ
ಗೊ. ರು. ಚನ್ನಬಸಪ್ಪ
ಪಿ. ಎಸ್. ಶಂಕರ್
ಶಿವಶಂಕರ ಹಿರೇಮಠ
ಆರ್. ಎಸ್. ರಾಜಾರಾಮ್
ಶ್ರೀಮತಿ ಎಲ್. ಜಿ. ಸುಮಿತ್ರ

ಸಂಪಾದಕ ಸಮಿತಿ

ಶ್ರೀಯುತರಾದ
ಎಸ್. ಜಿ. ನಾಗಲೋಟಿಮಠ
ಕೆ. ವಿ. ನಾರಾಯಣ
ಪುರುಷೋತ್ತಮ ಬಿಳಿಮಲೆ
ಕರೀಗೌಡ ಬೀಚನಹಳ್ಳಿ
ಅಮೃತ ಸೋಮೇಶ್ವರ
ಸಿ. ಆರ್. ಚಂದ್ರಶೇಖರ್
ಬಿ. ಎ. ಶ್ರೀಧರ
ಲಿಂಗದೇವರು ಹಳೆಮನೆ
ಭ. ಮಲ್ಲಿಕಾರ್ಜುನ
ಮಹಾಬಲೇಶ್ವರರಾವ್
ಭಕ್ತಪ್ರಿಯ
ಎಂ. ಪಿ. ಪರಮಶೇಖರಯ್ಯ
ಶ್ರೀಮತಿ ಉಷಾ ರಾಂಕುಮಾರ್

ಲೋಕಶಿಕ್ಷಣ ನಿರ್ದೇಶನಾಲಯ
ನವಸಾಕ್ಷರ ಪುಸ್ತಕ ಮಾಲೆ – ೯೪

ಬದುಕಿನ ದಾರಿಗಳು

ಎ.ಕೆ.ಮೋಹನ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ–೫೮೩ ೨೭೭

BADUKINA DAARIGALU: By A.K.Mohan. Published by The Director of Prasaranga,
Kannada University, Hampi - 583 211, KARNATAKA.
First Impression 1994, Pp.ii + 26, Rs. 8.00.

ಸಂಯೋಜನಾಧಿಕಾರಿ
ಡಾ.ಎಚ್.ಎಸ್.ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ — ೫೮೩ ೨೧೧

ಮುಖಪುಟ ವಿನ್ಯಾಸ
ಕೆ.ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್
8/1, ಮಾರೇನಹಳ್ಳಿ, 1ನೇ ಕ್ರಾಸ್, 23ನೇ ಮೇನ್,
ಜೆ. ಪಿ. ನಗರ, ಬೆಂಗಳೂರು-560 078.
ಫೋನ್: 642102

ಬದುಕಿನ ದಾರಿಗಳು

೧. ಅನುಭವ ತೋರಿದ ದಾರಿ

"ಅಮ್ಮಾ, ನನಗೆ ಕೆಲಸ ಸಿಕ್ಕಿತು "ರವಿ ಬಂದು ಹೇಳಿದಾಗ ತಾಯಿಗೆ ತುಂಬಾ ಸಂತೋಷವಾಯಿತು.

"ಹೌದೇ ! ಎಂಥಾ ಕೆಲಸ ?"

"ಪೋಸ್ಟ್‌ಮನ್ ಕೆಲಸ, ಈಗ ಸ್ವಲ್ಪ ಕಡಿಮೆ ಸಂಬಳವಾದರೂ, ಮುಂದೆ ಚೆನ್ನಾಗಿ ಸಿಗುತ್ತದೆ"

"ಅಬ್ಬ ದೇವರ ದಯೆಯಿಂದ ನಿನಗೊಂದು ಕೆಲಸವಾಯಿತು. ಇವತ್ತು ಮನೆ ದೇವರಿಗೆ ತುಪ್ಪದ ದೀಪ ಹಚ್ಚಬೇಕು" ತಾಯಿ ಎಂದಳು.

ರವಿಯ ತಂದೆಗೆ ಆರೋಗ್ಯವಿರಲಿಲ್ಲ. ಅವರು ಮಲಗಿದ್ದಲ್ಲಿಂದಲೇ ರವಿಯ ಮಾತು ಕೇಳಿ ಸಂತೋಷಪಟ್ಟರು. ಅವರು ಸಣ್ಣದೊಂದು ಚಹದಂಗಡಿಯಿಟ್ಟಿದ್ದರು.

ಅದರ ಸಂಪಾದನೆಯಲ್ಲೇ, ಹೇಗೋ, ಹೊಟ್ಟೆ ಬಾಯಿ ಕಟ್ಟಿಕೊಂಡು ಮೂರು ಮಕ್ಕಳನ್ನೂ ಹತ್ತನೇ ತರಗತಿಯವರೆಗೆ ಓದಿಸಿದ್ದರು. ಮುಂದೆ ಹೇಗಪ್ಪಾ, ಎಂದು ಯೋಚಿಸುತ್ತಿರುವಾಗಲೇ ದೇವರ ದಯದಿಂದ ಹಿರಿಯವನಿಗೊಂದು ಕೆಲಸವಾಗಿತ್ತು.

"ಅಣ್ಣ ನನಗೆ ಇಂಗ್ಲೀಷ್, ಗಣಿತ ಏನೇನೂ ತಿಳಿಯುವುದಿಲ್ಲ. ನನ್ನ ಕ್ಲಾಸಿನಲ್ಲಿ ಎಲ್ಲರೂ ಟ್ಯೂಷನ್‌ಗೆ ಹೋಗುತ್ತಾರೆ. ನಾನೂ ಹೋಗುತ್ತೇನೆ" ಹತ್ತನೇ ತರಗತಿಯಲ್ಲಿ ಓದುತ್ತಿದ್ದ ರಮೇಶ ಹೇಳಿದ.

ಹತ್ತನೇ ಕ್ಲಾಸಿನಲ್ಲಿ ಫೇಲಾಗಿ, ಮನೆಯಲ್ಲಿರುವ ತಂಗಿ ಗೋಮತಿ "ನನ್ನ ಬಳಿ ಒಂದೇ ಸೀರೆ ಇದೆ. ಬದಲಿಸಿ ಉಡುವುದಕ್ಕೆ ಬೇರೆ ಇಲ್ಲ ನಿನಗೆ ಸಂಬಳ ಬಂದೊಡನೆ, ನನಗೊಂದು ಸೀರೆ ಕೊಡಿಸಣ್ಣ "ಎಂದು ಕೇಳಿದಳು.

ರವಿ "ಆಗಲಿ ಎಲ್ಲರಿಗೂ ಎಲ್ಲವನ್ನು ಮಾಡುವ" ಎಂದ. ತಾಯಿ, ದೇವರಿಗೆ ತುಪ್ಪದ ದೀಪ ಹಚ್ಚಿಟ್ಟಳು. ರವಿ ಭಕ್ತಿ, ಶ್ರದ್ಧೆಯಿಂದ ನಮಸ್ಕರಿಸಿದ.

ರವಿಗೆ ನೌಕರಿ ಸಿಕ್ಕಿ ಸಾಕಷ್ಟು ಸಮಯವಾಗಿತ್ತು. ಅವನಿಗೆ ಮನೆಯವರು ಹೆಣ್ಣುನೋಡಿದರು. ಬೆಳ್ಳಗೆ, ತೆಳ್ಳಗೆ, ಮನೆಕೆಲಸಗಳನ್ನೆಲ್ಲ ತಿಳಿದವಳು, ಗುಣವಂತೆ, ಹೆಸರು ವಿಮಲ ಎಂದು. ರವಿಗೆ ಅವಳು ಒಪ್ಪಿಗೆಯಾದಳು.

ಹುಡುಗಿಯೂ ರವಿಯನ್ನು ನೋಡಿದಳು. ಒಳ್ಳೆಯ ಬಣ್ಣ. ಎತ್ತರವಾದ ಸುಂದರಕಾಯ, ಒಳ್ಳೆಯ ಸ್ವಭಾವ. ಅವಳಿಗೂ ರವಿ ಮೆಚ್ಚಿಗೆಯಾದ.

ಮನೆಯವರಿಗೂ ಇಬ್ಬರ ಜೋಡಿ ಒಪ್ಪಿಗೆಯಾಗಿತ್ತು. ರವಿ ವಿಮಲರ ಮದುವೆಯಾಯಿತು.

ವಿಮಲ ಗಂಡನ ಮನೆಯಲ್ಲಿ ಸಂತೋಷದಿಂದಿದ್ದಳು. ರವಿಗೆ ವಿಮಲಳಲ್ಲಿ ತುಂಬ ಪ್ರೀತಿ. ತಂದೆ ತಾಯಿಯೂ ವಿಮಲಳನ್ನು ಪ್ರೀತಿಯಿಂದ ಕಾಣುತ್ತಿದ್ದರು. ರಮೇಶ, ಗೋಮತಿಯರೂ ವಿಮಲಳೊಂದಿಗೆ ಸ್ನೇಹದಿಂದಿದ್ದರು.



ವಿಮಲ ಮತ್ತು ರವಿಯ ಮದುವೆ

ವಿಮಲಳಿಗೆ ತೌರಿನ ಕಡೆಯಿಂದ ಸ್ವಲ್ಪ ಭೂಮಿ ಉಡುಗೊರೆಯಾಗಿ ಸಿಕ್ಕಿತ್ತು ಅದನ್ನು ಮಾರಿ, ಒಳ್ಳೆಯ ಒಂದು ಜಾಗ ಖರೀದಿಸಿದರು. ಹತ್ತು ಸೆಂಟ್ಸ್ ಜಾಗ. ನಾಲ್ಕಾರು ಒಳ್ಳೆಯ ಫಲಗೊಡುವ ತೆಂಗಿನ ಮರಗಳನ್ನು ನೆಟ್ಟಿದ್ದರು.

ಇನ್ನೂ ಸ್ವಲ್ಪ ಹಣ ಉಳಿದಿತ್ತು. ರವಿ ಚೀಟಿಗೆ ಹಣ ಕಟ್ಟಿದ್ದ. ನಾಲ್ಕೈದು ಸಾವಿರ ರೂಪಾಯಿ ಸಿಕ್ಕಿತು. ಎರಡನ್ನು ಸೇರಿಸಿ ಒಂದು ಚೊಕ್ಕವಾದ ಪುಟ್ಟ ಮನೆಯನ್ನು ಕಟ್ಟಿದ.

ಪುಟ್ಟ ಮನೆಯಲ್ಲಿ ರವಿ, ವಿಮಲ ಸಂಸಾರ ಹೂಡಿದರು. ವಿಮಲ ರವಿಯ ಕೆಲಸಗಳಲ್ಲಿ ನೆರವಾಗುತ್ತಿದ್ದಳು. ಅವನ ಬೇಕು ಬೇಡಗಳನ್ನು ಗಮನಿಸಿ ಪೂರೈಸುತ್ತಿದ್ದಳು. ಮನೆಕೆಲಸಗಳನ್ನೂ ಅಚ್ಚುಕಟ್ಟಾಗಿ ಮಾಡಿಕೊಂಡು ಹೋಗುತ್ತಿದ್ದಳು. ಅತ್ತೆ ಮಾವಂದಿರ

ಸೇವೆಯನ್ನೂ ಶ್ರದ್ಧೆಯಿಂದ ಮಾಡುತ್ತಿದ್ದಳು. ರಮೇಶ ಪಿ.ಯು.ಸಿ ಓದುತ್ತಿದ್ದ. ಗೋಮತಿ ವಿಮಲಳಿಗೆ ಕೆಲಸದಲ್ಲಿ ನೆರವಾಗುತ್ತಿದ್ದಳು.

ರವಿಗೆ ಅನೇಕರ ಪರಿಚಯವಾಯಿತು. ಸುರೇಶ ಅವರಲ್ಲೊಬ್ಬ. ನೋಡಲು ಚೆನ್ನಾಗಿದ್ದ. ಕೆಲಸಮಾಡಿ ಉಣ್ಣುವ ತಾಕತ್ತಿದ್ದವನು. ರವಿಗೆ ಮೆಚ್ಚಿಗೆಯಾಯಿತು. ಸುರೇಶನಿಗೆ ಗೋಮತಿಯನ್ನು ಕೊಟ್ಟು ವಿವಾಹ ಮಾಡಿದರು. ಗೋಮತಿಗೆ ಎರಡು ಪವನಿಗೆ ಮೀರಿ ಚಿನ್ನ ಹಾಕಿದ್ದರು. ರವಿಯೇ ಎಲ್ಲ ವೆಚ್ಚ ಭರಿಸಿದ್ದ. ತಂದೆಗೆ ನೆಮ್ಮದಿಯಾಗಿತ್ತು.

ತಿಂಗಳುಗಳು ಕಳೆದವು. ವಿಮಲಳಿಗೆ ಚೊಚ್ಚಲ ಹೆರಿಗೆಯಾಯಿತು. ಮುದ್ದಾದ ಹೆಣ್ಣು ಮಗು. ವಿಮಲ ಹೇಳಿದಳು "ಮೂಗು ಅಪ್ಪನದೇ". ರವಿ ಹೇಳಿದ, "ಕಣ್ಣು ಅಮ್ಮನದು".

ಮಗುವಿಗೆ ಶ್ರೀದೇವಿಯೆಂದು ನಾಮಕರಣ ಮಾಡಿದರು. ಶ್ರೀದೇವಿ ಮನೆಯವರೆಲ್ಲರ ಕಣ್ಮಣಿಯಾದಳು.

ಶ್ರೀದೇವಿ ಈಗ ಮೂರನೇ ತರಗತಿಯಲ್ಲಿ ಓದುತ್ತಿದ್ದಾಳೆ. ಆಗಾಗ, ಅಮ್ಮ ಅಳುವುದನ್ನು ನೋಡುತ್ತಿದ್ದಳು. ಈ ದಿನ ಏಕೋ ತಾನು ಬಂದರೂ, ಹಾಗೇ ಅಳುತ್ತಾ ಕೂತಿದ್ದಾಳೆ.

"ಯಾಕಮ್ಮಾ ಅಳುತ್ತಿರುವುದು" ಕೇಳಿದಳು ಶ್ರೀದೇವಿ.

"ಅಪ್ಪ ಕುಡಿದು ಬಂದಿದ್ದಾರೆ. ಪಕ್ಕದ ಮನೆ ರಾಮನ ಜೊತೆಗೆ ಸೇರಿಯೇ ಈ ಚಟ ಬೆಳೆಸಿಕೊಂಡದ್ದು. ನಾನು ಮೊದಲೇ ಹೇಳಿದ್ದೆ. ಈ ಸ್ನೇಹ ಬೇಡವೆಂದು. ಕುಡಿದು ಬಂದು ವಾಂತಿ ಮಾಡಿ ಮನೆಯೆಲ್ಲಾ ಹೊಲಸೆಬ್ಬಿಸುತ್ತಾರೆ. ಇನ್ನು ದಿನವೂ ರಾಮನ ಹಾಗೆ ಕುಡಿದು ಬಂದರೆ ಏನು ಗತಿ?" ತಲೆಗೆ ಕೈ ಹೊತ್ತು ಕುಳಿತಿದ್ದಳು.

ಶ್ರೀದೇವಿಗೆ ಸಂಕಟವಾಯಿತು. ರಾಮ ನಿತ್ಯವೂ ಶರಾಬು ಕುಡಿದು ಬರುತ್ತಿದ್ದ. ಮನೆಯಲ್ಲಿ ಗಲಾಟೆ ಮಾಡುತ್ತಿದ್ದ. ಹೆಂಡತಿ ಮಕ್ಕಳನ್ನು ಹೊಡೆದು ಬಡಿದು ಮಾಡುತ್ತಿದ್ದ. ಮನೆಯ ವಸ್ತುಗಳನ್ನೆಲ್ಲ ಮಾರಿ ಬಂದ ಹಣದಲ್ಲಿ ಕುಡಿಯುತ್ತಿದ್ದ. ಸಣ್ಣ ಪುಟ್ಟ ಕಳ್ಳತನವನ್ನು ಮಾಡುತ್ತಿದ್ದ. ಊರಿನವರು ಹಿಡಿದು ಬಡಿಯುತ್ತಿದ್ದರು. ಆಗೀಗ ಪೋಲಿಸರೂ ಹಿಡಿದುಕೊಂಡು ಹೋಗುತ್ತಿದ್ದರು. ಆದರೂ ರಾಮ ಕುಡಿದು ಗಲಾಟೆ ಮಾಡುವುದನ್ನು ಬಿಟ್ಟಿರಲಿಲ್ಲ.

ಶ್ರೀದೇವಿಗೆ ಭಯವಾಯಿತು. ತನ್ನತಂದೆಯೂ ಹೀಗೆಯೇ ಆಗುವರೇ? ತಮ್ಮನ್ನೆಲ್ಲಾ ಹೊಡೆಯಬಹುದೆ?

ಶ್ರೀದೇವಿ ಮೆಲ್ಲನೆ ತಂದೆಯ ಬಳಿ ಹೋದಳು, ನೋಡಿದಳು. ತಂದೆ ಏನೂ ತಿಳಿಯದವರಂತೆ, ಎಚ್ಚರ ಇಲ್ಲದವರಂತೆ ಬಿದ್ದು ಕೊಂಡಿದ್ದಾರೆ. ಸೊರಗಿ ಹೋಗಿದ್ದಾರೆ.

"ಇದೇನು ಕಟ್ಟು. ಏನಾದರೂ ತಿನ್ನುವುದಕ್ಕಾ?"

"ಒಂದು ಕಿಲೋ ಸೇಬು ತಂದಿದ್ದೇನೆ" ರವಿ ಎಂದ.

"ಯಾಕೆ, ಏನು ವಿಶೇಷ?" ವಿಮಲ ಕೇಳಿದಳು

"ನನಗೆ ಈಗ ಬೇರೆ ರೀತಿಯ ಕೆಲಸ ಕೊಟ್ಟಿದ್ದಾರೆ. ಮನಿಯಾರ್ಡರನ್ನು ನಾನೇ ಖುದ್ದಾಗಿ ಹೋಗಿ ಕೊಡಬೇಕು. ಆಗೆಲ್ಲಾ ಭಕ್ಷೀಸು ಸಿಗುತ್ತದೆ. ಅಲ್ಲದೆ ಸಂಬಳವನ್ನು ಹೆಚ್ಚು ಮಾಡುತ್ತಾರೆ"

"ಹೌದಾ! ಹಾಗಾದರೆ ಇಂದು ದೇವಸ್ಥಾನಕ್ಕೆ ಹೋಗಿ ಹಣ್ಣುಕಾಯಿ ಮಾಡಿಸಬೇಕು. ಎಷ್ಟು ಹಣ ಹೆಚ್ಚು ಸಿಗುತ್ತದೆ?" ಕೇಳಿದಳು. ರವಿ ಎಂದ "ಎಲ್ಲಾ ಸೇರಿ ಮುನ್ನೂರು ರೂಪಾಯಿ ಸಿಗಬಹುದು."

"ಏನು, ಮುನ್ನೂರೇ ರೂಪಾಯಿಯಾ? ಅದೆಲ್ಲ ಬೇಡ, ನನಗೇನೂ ತಿಳಿಯುವುದಿಲ್ಲವೆಂದುಕೊಂಡಿದ್ದೀರಾ? ನಾನೂ ಹತ್ತನೇ ಕ್ಲಾಸಿನವರೆಗೆ ಓದಿದ್ದೇನೆ. ಐನೂರು ರೂಪಾಯಿಗಳಾದರೂ ಬರುತ್ತದೆ. ನಾನೂ ಚೀಟಿಗೆ ಸೇರಬೇಕು. ಮಗಳನ್ನು ಕಾಲೇಜಿಗೆ ಕಳಿಸಬೇಕು. ಅವಳಿಗೆ ಒಂದೆರಡು ಒಡವೆ ಮಾಡಿಸಬೇಕು. ವಿಮಲ ಎಂದಳು.

"ಶ್ರೀದೇವಿ ಹಣ್ಣು ತಗೋ" ಮಗಳಿಗೆ ಒಂದು ಸೇಬನ್ನು ಕೊಟ್ಟಳು. ಶ್ರೀದೇವಿ ಓಡಿ ಬಂದು ಹಣ್ಣನ್ನು ತೆಗೆದುಕೊಂಡಳು. ಅಂಗಡಿಗಳಲ್ಲಿ ರಾಶಿ ರಾಶಿ ಹಾಕಿಕೊಂಡಿದ್ದದ್ದನ್ನು ನೋಡಿದ್ದಳು. ಅವಳಿಗೆ ಸೇಬನ್ನು ತಿನ್ನಬೇಕೆಂಬ ಆಸೆ ಇತ್ತು. ಇಂದು ತಂದೆಯೇ ಸೇಬು ಹಣ್ಣು ತಂದಿದ್ದಾರೆ. ಎಷ್ಟು ಕೆಂಪಾಗಿದೆ, ಸಿಹಿಯಾಗಿದೆ.

ಶ್ರೀದೇವಿ ಕಚ ಕಚ ಕಚ್ಚಿ ಹಣ್ಣನ್ನು ತಿನ್ನಹತ್ತಿದಳು.

"ನೀವೂ ಒಂದು ತಿನ್ನಿ." ವಿಮಲ ರವಿಗೂ ಒಂದು ಹಣ್ಣು ಕೊಟ್ಟಳು. ಅತ್ತೆ ಮಾವನವರಿಗೂ ಒಂದೊಂದು ಹಣ್ಣು ಇಟ್ಟು, ತಾನೂ ಒಂದು ಹಣ್ಣನ್ನು ಎತ್ತಿಕೊಂಡಳು.

***

ಅಂದು ಸಂಜೆ ರವಿ ಕುಡಿದು ಬಂದಿದ್ದ. ಕೈಯಲ್ಲಿ ವಿದೇಶಿ ಮದ್ಯದ ಒಂದು ಸೀಸೆಯೂ ಇತ್ತು.

"ಇದೇನು?" ವಿಮಲ ಕೇಳಿದಳು.

"ಇದು 'ಫಾರಿನ್ ವಿಸ್ಕಿ' ರಜಾಕ್ ಸಾಯ್ಬರು ಕೊಟ್ಟದ್ದು. ನಾನಲ್ಲವೇ ಮನಿಯಾರ್ಡರ್ ಕೊಟ್ಟು ಬರುವುದು. ಮಗ ಕೊಲ್ಲಿ ದೇಶದಲ್ಲಿದ್ದಾನೆ. ತುಂಬಾ ದುಡ್ಡು ಕಳಿಸಿದ. ದುಡ್ಡು ಬಂದ ಖುಶಿಯಲ್ಲಿ ಇದನ್ನು ಕೊಟ್ಟರು. ಒಂದು ಶರ್ಟಿನ ಬಟ್ಟೆಯನ್ನೂ

ಕೊಟ್ಟಿದ್ದಾರೆ.'' ಅಂಚೆಚೀಲದಲ್ಲಿಯೇ ಇಟ್ಟುಕೊಂಡಿದ್ದ ಶರ್ಟಿನ ಬಟ್ಟೆಯನ್ನು ತೆಗೆದು ತೋರಿಸಿದ.

''ಈ ಶರ್ಟಿನ ಬಟ್ಟೆಯೊಂದು ಸಾಕಾಗಿತ್ತು. ಆ ಸೀಸೆಯನ್ನು ಏಕೆ ತೆಗೆದುಕೊಂಡಿರಿ'' ವಿಮಲ ಸಂಕಟದಿಂದ ಹೇಳಿದಳು.

''ಸ್ವಲ್ಪ ಕುಡಿದರೇನೂ ತೊಂದರೆ ಇಲ್ಲ. ಶೀತ ನೆಗಡಿಗೆ, ರಕ್ತ ಸಂಚಾರಕ್ಕೆ ಒಳ್ಳೆಯದು ''

ವಿಮಲಾ ಮತ್ತೇನನ್ನು ಹೇಳಲು ಹೋಗಲಿಲ್ಲ. ಸುಮ್ಮನೆ ದುಖವನ್ನು ನುಂಗಿಕೊಂಡಳು.

***

ಶ್ರಿದೇವಿ ಓಡೋಡಿ ಬರುತ್ತಿದ್ದಳು. ವಿಮಲ ಮನೆಯ ಬಾಗಿಲಲ್ಲೇ ನಿಂತು ನೋಡುತ್ತಿದ್ದಳು. ಶ್ರಿದೇವಿ ಕಣ್ಣಲ್ಲಿ ನೀರಿತ್ತು. ವಿಮಲ ಗಾಬರಿಯಿಂದ ಕೇಳಿದಳು. ''ಯಾಕಮ್ಮ ಅಳುತ್ತಿ, ಏನಾಯಿತು ?''

''ಅಪ್ಪ ಸಂಕದ ಕೆಳಗೆ ಬದ್ದಿದ್ದಾರೆ ಸೈಕಲ್ ಬಿದ್ದುಪತ್ರಗಳ ಚೀಲ ತೋಡಿನಲ್ಲಿದೆ'' ಶ್ರಿದೇವಿ ಬಿಕ್ಕಿ ಬಿಕ್ಕಿ ಅಳುತ್ತಿದ್ದಳು.

''ದೇವರೇ, ಎಂಥಾ ಕೆಲಸವಾಯಿತು'' ವಿಮಲ ಎದೆ ಹೊಡೆದುಕೊಂಡು ಬೊಬ್ಬಿಟ್ಟಳು. ಅಳು ಕೇಳಿ ರಾಮನ ಹೆಂಡತಿ, ಮಕ್ಕಳು ಓಡಿ ಬಂದರು. ರಾಮನ ಹೆಂಡತಿಯೆಂದಳು.

''ಊರವರ ಪತ್ರಗಳೆಲ್ಲ ಚೀಲದಲ್ಲಿತ್ತು. ಅದನ್ನು ಕೊಟ್ಟ ಮೇಲೆ ಕುಡಿದಿದ್ದರೆ ಸಾಲದಿತ್ತೇ? ಏನೆಲ್ಲಾ ಅಗತ್ಯದ ಪತ್ರಗಳಿದ್ದವೋ! ಊರವರು ಫಿರ್ಯಾದು ಕೊಟ್ಟರೆ!''

ವಿಮಲೆಗೆ ಅಳು ನಿಲ್ಲಿಸಲಾಗಲಿಲ್ಲ.



ಕುಡಿದ ರವಿಯನ್ನು ಹೊತ್ತುಕೊಂಡು ಬರುತ್ತಿರುವುದು

"ನಾಲ್ಕೈದು ಜನ ರವಿಯನ್ನು ಹೊತ್ತುಕೊಂಡು ಬರುತ್ತಿದ್ದರು. ವಿಮಲಳಿಗೆ ಸಿಟ್ಟು, ದುಃಖ ಒಮ್ಮೆಗೇ ಬಂತು. ಸಿಟ್ಟಿನಲ್ಲಿ ಬಾಯಿಗೆ ಬಂದಂತೆ ಅಬ್ಬರಿಸಲು ಶುರುಮಾಡಿದಳು. "ಈ ಬೇತಾಳ ಹೀಗೇಕೆ ಮಾಡುತ್ತಿದ್ದಾನೆ? ಊರವರೆಲ್ಲ ನಗಾಡಲಿಕ್ಕಲ್ಲವೇ? ದೇವರೇ, ನನ್ನ ಹಣೆಬರಹ, ಇಂಥ ಪ್ರಾಣಿಯನ್ನು ಹೇಗಪ್ಪ ನಿಭಾಯಿಸುವುದು?"

ಯಾರೇನು ಹೇಳಿದರೇನು? ರವಿಗೆ ಎಚ್ಚರವೇ ಇಲ್ಲ. ಹೊತ್ತುಕೊಂಡು ಬಂದವರು, ಜಗುಲಿಯಲ್ಲಿ ಅವನನ್ನು ಮಲಗಿಸಿದ್ದರು. ಹಣೆ ಒಡೆದಿದೆ, ರಕ್ತ ಒಸರುತ್ತಿದೆ, ಮೈಕೈಗೆಲ್ಲ ತರಚಿದ ಗಾಯವಾಗಿದೆ. ಹೊಟ್ಟೆಗೂ ಪೆಟ್ಟಾಗಿದೆ. ಚೀಲದಲ್ಲಿದ್ದ ಪತ್ರಗಳೆಲ್ಲಾ ನೆನೆದಿವೆ.

ರವಿಯ ತಂದೆ ತೀರಾ ಅಸ್ವಸ್ತರಾಗಿದ್ದರು. ಮಗನನ್ನು ಕ್ಷೀಣವಾಗಿ ಕರೆಯುತ್ತಿದ್ದರು. ರವಿಗೆಲ್ಲಿ ಕೇಳಿಸುತ್ತದೆ? ಅವ ಮದ್ಯದಂಗಡಿಯಲ್ಲಿ ಕುಡಿದು ಬಿದ್ದುಕೊಂಡಿದ್ದ. ಕೆಲವರು ರವಿಯನ್ನು ಕರೆತರಲು ಹೋದರು. ರವಿಯನ್ನು ಶರಾಬಿನಂಗಡಿಯಿಂದ ಕರೆತರುವುದರೊಳಗೆ ತಂದೆ ಕಣ್ಣು ಮುಚ್ಚಿದ್ದರು. ರವಿ ಮರಳಿ ಶರಾಬು ಅಂಗಡಿಗೇ ಹೋದ. ಕೇಕೆ ಹಾಕುತ್ತ ಓಲಾಡುತ್ತ ಮನೆಗೆ ಬಂದ. ರವಿಯ ತಾಯಿಗೆ ದುಃಖ ತಡೆದುಕೊಳ್ಳಲು ಆಗಲಿಲ್ಲ. ಚಿಕ್ಕಮಗ ಊರಿನಲ್ಲಿಲ್ಲ. ಅವ ಸೇನೆಗೆ ಸೇರಿದ್ದ. ಮಗಳು ಗಂಡನೊಂದಿಗೆ ಪರವೂರಿನಲ್ಲಿದ್ದಳು. ಅವಳಿಗೆ ಸುದ್ದಿ ಮುಟ್ಟಿಸಬೇಕಿತ್ತು. ಎಲ್ಲವನ್ನು ನಿಂತು ಮಾಡಬೇಕಾದವ ರವಿ. ಅವನೋ ಹೀಗೆ! "ಅಯ್ಯೋ! ಎಂಥಾ ಮಗನನ್ನು ಹೆತ್ತೆ! ಅಪ್ಪ ಸತ್ತು ಬಿದ್ದಿದ್ದಾನೆ, ಮಗ ಹಾಡು ಹಾಡಿಕೊಂಡು ನಗುತ್ತಿದ್ದಾನೆ ಎಲ್ಲ ನನ್ನ ಕರ್ಮ" ಎಂದು ಅಳುತ್ತಿದ್ದಳು.

ರವಿ ವಾಂತಿ ಮಾಡಿಕೊಂಡ. ಎಚ್ಚರ ತಪ್ಪಿ ಬಿದ್ದ. ಊರವರೇ ರವಿಯ ತಂದೆಯನ್ನು ಮಣ್ಣು ಮಾಡಿದರು. ತಂದೆಯ ಶವವನ್ನು ಮಣ್ಣು ಮಾಡಿದ್ದೂ ರವಿಗೆ ಗೊತ್ತಾಗಲಿಲ್ಲ.

ಎರಡು ದಿನದಿಂದ ರವಿ ತುಂಬಾ ಸಪ್ಪಗಿದ್ದ. ಏನೋ ಚಿಂತಿಸುತ್ತಿರುವಂತೆ ಕಾಣುತ್ತಿತ್ತು. ವಿಮಲೆ ಕೇಳಿದಳು "ಯಾಕೆ ಸಪ್ಪಗಿದ್ದೀರಿ, ಏನಾಯಿತು?"

"ಕೆಲಸ ಕೆಟ್ಟು ಹೋಯಿತು" ರವಿ ಎಂದ.

"ಯಾಕೆ, ಏನು ವಿಷಯ?"

"ನನ್ನನ್ನು ಕೆಲಸದಿಂದ ಸಸ್ಪೆಂಡ್ ಮಾಡಿದ್ದಾರೆ, ಇನ್ನು ಅವರು ಕರೆಯುವವರೆಗೆ ಕೆಲಸವಿಲ್ಲ"

"ಅಯ್ಯೋ! ಯಾಕಂತೆ, ಸರಿಯಾಗಿ ವಿವರಿಸಿ ಹೇಳಬಾರದಾ?"

"ಸೀತಮ್ಮನಿಗೆ ಮನಿಯಾರ್ಡರ್ ಬಂದಿತ್ತು. ಅವಳ ಹಣವನ್ನು ನಾನೇ ಖರ್ಚುಮಾಡಿದ್ದೆ. ಅವಳ ಸಹಿಯನ್ನು ನಾನೇ ಮಾಡಿ ಹಣ ತೆಗೆದಿದ್ದೆ. ಅವಳ ಮಗ ಗಣೇಶ ಕಳಿಸಿದ ದುಡ್ಡು ಅದು. ಗಣೇಶ ಈಗ ಮನೆಗೆ ಬಂದಿದ್ದಾನೆ. ವಿಷಯ ತಿಳಿದು ಕಂಪ್ಲೇಂಟ್ ಕೊಟ್ಟಿದ್ದಾನೆ. ನೌಕರಿಗೆ ಬರಬೇಡವೆಂದು ಆಫೀಸಿನವರು ಮೆಮೋ ಕೊಟ್ಟಿದ್ದಾರೆ" ರವಿ ಹೋ ಎಂದು ಅಳುತ್ತಿದ್ದ.

ವಿಮಲ ಪತ್ರವನ್ನು ನೋಡಿದಳು ಎಲ್ಲ ಇಂಗ್ಲೀಷಿನಲ್ಲಿತ್ತು. ಒಂದೂ ಅರ್ಥವಾಗಲಿಲ್ಲ. ರವಿ ಹೇಳಿದ ವಿಷಯ ಕೇಳಿ ವಿಮಲಳ ಕಣ್ಣು ತುಂಬಿ ಬಂತು.

ಶ್ರೀದೇವಿ ಕಾಲೇಜಿನಿಂದ ಬಂದಳು, ಅಮ್ಮ, ಅಪ್ಪ ಅಳುತ್ತಿರುವುದನ್ನು ನೋಡಿ ಗಾಬರಿಗೊಂಡಳು. ವಿಷಯ ತಿಳಿಯಲು ತಡವಾಗಲಿಲ್ಲ. ಇಡೀ ಮನೆಯೇ ಗೋಳಿಡುತ್ತಿತ್ತು.

ರವಿಯ ಮೇಲಿನ ಆರೋಪ ಕುರಿತು ತನಿಖೆಯಾಯಿತು. ರವಿಯನ್ನು ಕರೆದು ವಿಚಾರಿಸಿದರು. ಸೀತಮ್ಮನನ್ನು ಗಣೇಶನನ್ನು ಕರೆದು ಮಾಹಿತಿ ಸಂಗ್ರಹಿಸಿದರು. ಅವರು ರವಿಗೆ ವಿರುದ್ಧವಾಗಿ ಹೇಳಿಕೆ ಕೊಟ್ಟರು. ಪತ್ರವನ್ನೆಲ್ಲ ತೋಡಿಗೆ ಎಸೆದದ್ದನ್ನು, ಸಮಯಕ್ಕೆ ಸರಿಯಾಗಿ ಮನಿಯಾರ್ಡರ್ ತಲುಪಿಸದಿದ್ದನ್ನು, ಕುಡಿದು ಗಲಾಟೆ ಮಾಡುವುದನ್ನು ಹೇಳಿದರು. ರವಿ ಹಣವನ್ನು ಕದ್ದದ್ದು ತನಿಖೆಯಿಂದ ಸಾಬೀತಾಯಿತು. ರವಿಯನ್ನು ಕೆಲಸದಿಂದ ತೆಗೆದು ಹಾಕಿದರು.

ರವಿ ಏನೂ ತೋಚದೇ ಕುಳಿತಿದ್ದ. ವಿಮಲೆ ಹೇಳಿದಳು:

"ಇನ್ನು ಹಣ ಸಂಪಾದನೆಗೆ ಬೇರೆ ದಾರಿ ಹುಡುಕಬೇಕು. ನಾನು ಕೂಲಿ ಕೆಲಸಕ್ಕಾದರೂ ಹೋಗುತ್ತೇನೆ. ಮನೆಯ ವೆಚ್ಚಗಳನ್ನೆಲ್ಲ ನಾನೇ ನೋಡಿಕೊಳ್ಳುತ್ತೇನೆ. ನೀವು ಮನೆಯ ಹತ್ತಿರದ ಸಣ್ಣ ಪುಟ್ಟ ಕೆಲಸ ನೋಡಿಕೊಂಡಿರಿ. ಇನ್ನು ಮುಂದೆ ಕುಡಿಯುವುದನ್ನು ಬಿಟ್ಟುಬಿಡಿ. ಹೇಗೋ ದೇವರು ನಡೆಸುತ್ತಾನೆ" ರವಿಗೆ ಸಮಾಧಾನ ಮಾಡಿದಳು ವಿಮಲ.

"ನೌಕರೀಯೇ ಹೋಗಬಹುದೆಂದು ನಾನು ತಿಳಿದಿರಲಿಲ್ಲ. ಕುಡಿಯ ಬೇಡವೆಂದು ಬಹಳ ಜನ ಹೇಳಿದ್ದರು. ಆಗ ಅವರ ಮಾತು ನಾನು ಕೇಳಲಿಲ್ಲ. ಈಗ ನಾನೇನು ಮಾಡಲಿ? ಇನ್ನು ಇವಳು ಕಾಲೇಜಿಗೆ ಹೋಗುವುದು ನಿಲ್ಲಿಸಲಿ. ಅವಳ ಫೀಸಿಗೆ ಹಣವನ್ನು ನಾನೆಲ್ಲಿಂದ ತರಬೇಕು, ಅವಳಿಗೆ ಒಂದಿಷ್ಟು ಚಿನ್ನ ಮಾಡಿಸಬೇಕೆಂದರೂ ಆಗಲಿಲ್ಲ. ಎಲ್ಲ ನನ್ನ ಹಣೆಬರಹ" ರವಿ ಅಳಹತ್ತಿದ.

"ಹಣೆಬರಹವೆಂದರೇನು ? ಎಲ್ಲ ನೀವೇ ಮಾಡಿಕೊಂಡದ್ದು. ಕುಡಿಯುವ ಅಭ್ಯಾಸ ಮಾಡದೇ ಇದ್ದಿದ್ದರೆ, ಈಗ ಈ ಗತಿ ಬರುತ್ತಿತ್ತಾ? ಏನೋ, ಆದದ್ದಾಯಿತು. ಇನ್ನು ಮುಂದಾದರೂ ಕುಡಿತವನ್ನು ಬಿಟ್ಟುಬಿಡಿ"ವಿಮಲ ಹೇಳಿದಳು.

ರವಿ ಈಗ ದಿನವೂ ಕುಡಿಯುತ್ತಿದ್ದ. ಕೆಲಸ ಕಳೆದುಕೊಂಡ ನಿರಾಶೆ, ಹೊತ್ತು ಹೋಗದೆ, ಕುಡಿಯುತ್ತಿರುವುದನ್ನೇ ಉದ್ಯೋಗ ಮಾಡಿಕೊಂಡಿದ್ದ. ವಿಮಲ ಕೂಲಿ ನಾಲಿ ಮಾಡಿ ಸಂಪಾದಿಸುತ್ತಿದ್ದಳು. ಎಲ್ಲ ಹಣವನ್ನು ರವಿ ಕಸಿದುಕೊಳ್ಳುತ್ತಿದ್ದ. ತಾಯಿ ಮಗಳು ಉಪವಾಸವಿರುತ್ತಿದ್ದರು. ರವಿ ಮೂಗಿನವರೆಗೆ ಕುಡಿದು ಬಿದ್ದಿರುತ್ತಿದ್ದ. ವಿಮಲ ಕೂಲಿಯನ್ನು ಒಪ್ಪಿಸದಿದ್ದರೆ ಜಗಳ ಕಾಯುತ್ತಿದ್ದ. ಹೊಡೆದು ಬಡಿದು ಮಾಡುತ್ತಿದ್ದ. ಕುಡಿಯಲು ಹಣವಿಲ್ಲದಾಗ ರವಿ ಮನೆಯಲ್ಲಿದ್ದ ಪಾತ್ರೆಗಳನ್ನು ಕೊಂಡುಹೋಗಿ ಮಾರುತ್ತಿದ್ದ. ಸಿಕ್ಕಿದ ಬೆಲೆಗೆ ಮಾರಿ ಕುಡಿದು ಬಿಡುತ್ತಿದ್ದ. ವಿಮಲ ಕೆಲವೊಮ್ಮೆ ತಡೆದು ಗಲಾಟೆ ಮಾಡುತ್ತಿದ್ದಳು. ರವಿ ವಿಮಲಳನ್ನು ಹೊಡೆಯುತ್ತಿದ್ದ. ಅವಳು ತಪ್ಪಿಸಿಕೊಳ್ಳಲು ಓಡಿದರೆ ಬೆನ್ನಟ್ಟಿ ಬರುತ್ತಿದ್ದ. ಹೊರಗೆಳೆದು ಬಡಿಯುತ್ತಿದ್ದ ಮನೆಯವರೆಗೂ ಎಳೆದು ತರುತ್ತಿದ್ದ ಕಣ್ಣು, ಮೂಗು. ಹೊಟ್ಟೆ ಎಂದು ನೋಡದೆ ಒದೆಯುತ್ತಿದ್ದ. ಮಗಳು ಶ್ರಿದೇವಿ ತಡೆಯಲು ಹೋದರೆ ಅವಳಿಗೂ ಏಟು ಬೀಳುತ್ತಿತ್ತು.

ವಿಮಲೆ ಕೆಲಸ ಮಾಡಲು ಅಶಕ್ತಳಾಗಿದ್ದಳು. ದುಡ್ಡಿನ ದಾರಿ ಕಾಣದಾಯಿತು. ಮನೆಯ ತೆಂಕುದಿಕ್ಕಿನಲ್ಲಿ ಒಂದು ತೆಂಗಿನ ಮರವಿತ್ತು. ಒಳ್ಳೆ ಫಲಕೊಡುತ್ತಿತ್ತು. ವಿಮಲ

ಮರದ ಬುಡಕ್ಕೆ ಸೊಪ್ಪು ಹಾಕುತ್ತಿದ್ದಳು. ಗೊಬ್ಬರ ಹಾಕುತ್ತಿದ್ದಳು. ನೀರು ಸೇದಿ ಹಾಕುತ್ತಿದ್ದಳು. ರವಿ ಮರದ ತಲೆಯನ್ನೇ ನೋಡುತ್ತಿರುವ. ಒಂದೊಂದು ಗೊನೆಯಲ್ಲಿ ಇಪ್ಪತ್ತು ಮೂವತ್ತು ಕಾಯಿಗಳು ಬಿಡುತ್ತಿದ್ದವು. ಒಳ್ಳೆಯ ಕಾಯಿಗಳನ್ನು ಕೊಯ್ಯುತ್ತಿದ್ದ. ಕೊಯ್ದ ಕಾಯಿಗಳನ್ನು ಅಡ್ಡದುಡ್ಡಗೆ ಮಾರಿ ಅಂದಿನ ಕುಡಿತ ನಡೆಸುತ್ತಿದ್ದ.

"ತೆಂಗಿನ ಮರ ಏರುವಾಗಲೇ ಎಲ್ಲ ಕಾಯಿಗಳನ್ನು ಕೊಯ್ಯಬೇಡಿ, ಕೆಲವಿನ್ನೂ ಸರಿಯಾಗಿ ಬಲಿತಿಲ್ಲ" ವಿಮಲ ಹೇಳಿದಳು.

"ಕೊಯ್ಯುತ್ತೇನೆ"ರವಿ ಮರ ಏರುತ್ತಲೇ ಹೇಳಿದ.

"ನಾನು ಬಿಡುವುದಿಲ್ಲ. ಸಿಕ್ಕಾಪಟ್ಟೆ ಕಾಯಿ ಕೊಯ್ದು, ಮಾರಿ ಬಂದ ಹಣದಲ್ಲಿ ಕುಡಿಯುತ್ತಿರುತ್ತೀರಿ. ನಾವಿಲ್ಲಿ ಉಪವಾಸ ಸಾಯುತ್ತಿದ್ದೇವೆ" ಎಂದು ಮರವನ್ನು ತಬ್ಬಿಕೊಂಡು ನಿಂತಳು.

ಶ್ರೀದೇವಿ ತಾಯಿಯನ್ನು ಅಲ್ಲಿಂದ ಕದಲಿಸಲು ಪ್ರಯತ್ನಿಸಿದಳು. ಆದರೆ ಸಾಧ್ಯವಾಗಲಿಲ್ಲ.

"ಬೇಗ ದೂರ ನಿಲ್ಲು. ಇಲ್ಲವಾದರೆ ಕಾಯಿಯನ್ನು ತಲೆಯ ಮೇಲೆ ಕೊಯ್ದು ಹಾಕುತ್ತೇನೆ" ರವಿ ಮರದ ಮೇಲಿಂದಲೇ ಕೂಗಿದ.

"ನೀವು ನನ್ನನ್ನು ಕೊಂದರೂ ಸರಿ, ನಾನು ಇಲ್ಲಿಂದ ಕದಲುವುದಿಲ್ಲ"ವಿಮಲ ಹಾಗೆಯೇ ನಿಂತಿದ್ದಳು.

ರವಿ ಹೇಳಿದಂತೆ ಮಾಡಿದ. ಕಾಯಿಗಳ ಗೊನೆ ಬಿದ್ದು ವಿಮಲಳ ತಲೆ ಒಡೆಯಿತು. ವಿಮಲ ಉರುಳಿ ಬಿದ್ದಳು. ಬಾಯಿ, ಮೂಗುಗಳಿಂದ ರಕ್ತ ಸುರಿಯುತ್ತಿತ್ತು. ಶ್ರೀದೇವಿ, ರಾಮನ ಹೆಂಡತಿ ಇಬ್ಬರೂ ವಿಮಲಳನ್ನೂ ಎಬ್ಬಿಸಲು ಪ್ರಯತ್ನಿಸಿದರು.



ರವಿ ತೆಂಗಿನ ಗೊನೆಯನ್ನು ವಿಮಲಳ ತಲೆಯ ಮೇಲೆ ಹಾಕಿದ

ವಿಮಲ ಮಿಸುಕಾಡಲಿಲ್ಲ. ಅವಳಿಗೆ ಎಚ್ಚರ ತಪ್ಪಿತ್ತು. ರವಿ ತೆಂಗಿನ ಮರದ ತುದಿಯಲ್ಲೇ ಇದ್ದ.

***

ಮಲಗಿದ್ದ ವಿಮಲ ಮೆಲ್ಲನೆ ಕಣ್ಣು ಬಿಟ್ಟಳು. ತಲೆ ಭಾರವೆನಿಸಿತ್ತು. ಮುಟ್ಟಿ ನೋಡಿಕೊಂಡಳು. ತಲೆಗೆ ಹತ್ತಿ ಬಟ್ಟೆಗಳನ್ನು ಸುತ್ತಿ ಕಟ್ಟಿದ್ದರು.

ಅವಳ ಪಕ್ಕದಲ್ಲೇ ಕುಳಿತಿದ್ದ ಶ್ರೀದೇವಿ ಹೇಳಿದಳು "ಕಟ್ಟು ಬಿಚ್ಚಿಕೊಳ್ಳಬೇಡಮ್ಮ. ಔಷಧಿ ಹಾಕಿ ಕಟ್ಟಿದ್ದಾರೆ. ಆರು ಗಾಯಗಳಾಗಿವೆ".

ವಿಮಲ ಸುತ್ತಲೂ ನೋಡಿದಳು. ಮಂಚದ ಮೇಲೆ ರೋಗಿಗಳು ಮಲಗಿದ್ದರು. ತಾನು ಆಸ್ಪತ್ರೆಯಲ್ಲಿರುವುದು ಆಗ ಅವಳಿಗೆ ತಿಳಿಯಿತು. ಔಷಧಿಯ ವಾಸನೆ ಎಲ್ಲೆಡೆ ಕವಿದಿತ್ತು.

ರಾಮನ ಹೆಂಡತಿ ಅವರಿಗೆ ಊಟ ತಂದಳು. ಹಪ್ಪಳ, ಚಟ್ನಿಯನ್ನೂ ತಂದಿದ್ದಳು. ಬುತ್ತಿಯನ್ನು ಶ್ರೀದೇವಿಯ ಕೈಗೆ ಕೊಟ್ಟು, ವಿಮಲಳನ್ನು ನೋಡಿ ಹೇಳಿದಳು.

"ನಮ್ಮ ಎರಡೂ ಕುಟುಂಬದ ಹಣೆಬರಹ ಹೀಗಾಗಿ ಹೋಯಿತಲ್ಲ"

"ನಾವು ಮಾಡಬೇಕಾದುದನ್ನು ಮಾಡುವುದಿಲ್ಲ. ಅದರಿಂದ ಹೀಗಾಗಿದೆ" ಶ್ರೀದೇವಿಯೆಂದಳು.

"ನಾವೇನು ಮಾಡಬೇಕು?ಕುಡಿಯಬೇಡಿರೆಂದರೂ ಗಂಡಸರು ಕುಡಿಯುತ್ತಿದ್ದರೆ, ನಾವೇನು ಮಾಡಲಿಕ್ಕಾಗುತ್ತದೆ?"

ಶ್ರೀದೇವಿ "ಹೆಂಗಸರು ಮನಸ್ಸು ಮಾಡಿದರೆ, ಗಂಡಸರ ಕುಡಿತ ನಿಲ್ಲಿಸಬಹುದು. ಎಲ್ಲೋ ಒಂದು ಕಡೆ, ಹೆಂಗಸರೆಲ್ಲಾ ಒಟ್ಟಾಗಿ ಶರಾಬಿನ ಅಂಗಡಿಗಳನ್ನು ಮುಚ್ಚಿಸಿದ್ದಾರೆಂದು ಓದಿದ್ದೆ. ಗಂಡಸರು ಕುಡಿದರೆ ಕಷ್ಟ ಅನುಭವಿಸಬೇಕಾದವರು ಹೆಂಗಸರಲ್ಲವೇ?"ಎಂದಳು.

"ಅದು ಸರಿ, ನಾವೇನು ಮಾಡೋಣ?" ರಾಮನ ಹೆಂಡತಿ ಕೇಳಿದಳು. ಶ್ರೀದೇವಿ "ಗಂಡಸರು ಕುಡಿಯಲು ಹೋಗುವಾಗ ನಾವೂ ಅವರ ಜೊತೆಗೆ ಹೋಗಬೇಕು"

"ಹೋಗಿ?"

"ಶರಾಬಿನ ಅಂಗಡಿಯ ಎದುರು ಕುಳಿತುಕೊಳ್ಳಬೇಕು. ಯಾರನ್ನು ಒಳಗೆ ಹೋಗಲು ಬಿಡಬಾರದು" ಶ್ರೀದೇವಿಯೆಂದಳು.

"ಹೋ !ಇದು ಸರಿ. ನಾವೊಮ್ಮೆ ಹಾಗೆ ಮಾಡಿ ನೋಡಬಹುದು. ನಾಲ್ಕೈದು ಮಂದಿಯಾದರೂ" ರಾಮನ ಹೆಂಡತಿ ಹೇಳಿದಳು.

ಶ್ರೀದೇವಿ ಹೇಳಿದಳು "ಜನರನ್ನು ಬೇಕಾದರೆ ನಾನು ಕರೆದುಕೊಂಡು ಬರುತ್ತೇನೆ. ಮಹಿಳಾ ಸಮಾಜದವರಿದ್ದಾರೆ. ಮದ್ಯವಿರೋಧಿ ಸಂಘಟಕರಿದ್ದಾರೆ"

ಸಂಜೆಯ ನಾಲ್ಕು ಗಂಟೆ ಶಾಲೆಯ ಮುಂಭಾಗದ ಅಂಗಳದಲ್ಲಿ ಅನೇಕ ಹೆಂಗಸರು ನೆರೆದಿದ್ದಾರೆ. ಒಂದು ಬದಿಯಲ್ಲಿ ಒಂದು ಮೇಜು ಮೂರು ಕುರ್ಚಿಗಳನ್ನು ಹಾಕಿದ್ದರು. ಸುಮತಿ ಟೀಚರ್, ಗೋವಿಂದ ಮಾಸ್ತರು, ಗೋಪಾಲ ಮಾಸ್ತರು ಮೇಜಿನ ಎದುರಿದ್ದ ಕುರ್ಚಿಯಲ್ಲಿ ಕುಳಿತಿದ್ದರು.

ರಾಮನ ಹೆಂಡತಿ ಮೇಜಿನ ಸಮೀಪಕ್ಕೆ ಬಂದು ಹೇಳಿದಳು.

"ಸಭೆ ಆರಂಭವಾಗುತ್ತಿದೆ. ಗೋಪಾಲ ಮಾಸ್ತರರು ಇವತ್ತಿನ ಅಧ್ಯಕ್ಷರು. ಮೊದಲಿಗೆ ಪ್ರಾರ್ಥನೆ"

ಶ್ರೀದೇವಿ ವೇದಿಕೆಯತ್ತ ಹೋದಳು. ಅರ್ಥ ತುಂಬಿ ಹಾಡಿದಳು

ದೈವವೆ ಇವರನ್ನೆಚ್ಚರಿಸು
ಒಳ್ಳೆಯ ದಾರಿಯ ತೋರಿಸು
ಮನೆ ಮಂದಿಯನು ಉದ್ಧರಿಸು ||ಪ||
ಹೆಂಡದಂಗಡಿಯ ಮೊರೆ ಹೊಕ್ಕವರು
ದುಡಿಮೆ ದೈವವನು ಮರೆತವರು
ಹೆಂಡತಿ ಮಕ್ಕಳ ಕಡೆಗಣಿಸಿ
ಬೀದಿಗಳಲ್ಲಿ ಬಿದ್ದವರು ||ದೈವವೆ||

ಸುಮತಿ ಟೀಚರ್ ಎದ್ದು ನಿಂತು ಹೇಳಿದರು "ನಮ್ಮ ದೇಶದ ಗಂಡಸರಲ್ಲಿ ಅನೇಕ ಮಂದಿ ಕುಡಿಯುತ್ತಾರೆ ಶರಾಬಿನ ಅಂಗಡಿಯವರು ಹಣವಂತರಾಗುತ್ತಾರೆ. ನಮ್ಮ ಗಂಡಸರ ಆರೋಗ್ಯವೂ ನಾಶವಾಗುತ್ತದೆ, ನಮ್ಮ ಹಣವೂ ಹೋಗುತ್ತದೆ. ಇದರಿಂದ ನಮ್ಮ ಮನೆಗಳಲ್ಲಿ ನೆಮ್ಮದಿಯೇ ಇಲ್ಲವಾಗಿದೆ. ಈಗ ನಾವು ಎಚ್ಚೆತ್ತುಕೊಳ್ಳಬೇಕಾಗಿದೆ. ವಿಮಲಳ ವಿಷಯ ಗೊತ್ತಿರಬೇಕಲ್ಲ. ಇವತ್ತು ಆಕೆ ಆಸ್ಪತ್ರೆಯಿಂದ ಹೊರ ಬಂದಿದ್ದಾಳೆ ನಾವು ನಮ್ಮ ಗಂಡಸರನ್ನು ಹಿಡಿತದಲ್ಲಿ ಇಟ್ಟುಕೊಳ್ಳಬೇಕು. ಅದಕ್ಕೇನು ದಾರಿ? ಇದನ್ನು ಕಂಡುಕೊಳ್ಳುವ ಸಲುವಾಗಿ ನಾವಿಂದು ಇಲ್ಲಿ ಸೇರಿದ್ದೇವೆ.

ಗೋವಿಂದ ಮಾಸ್ತರು ಹೇಳಿದರು. ''ಬರೀ ಭಾಷಣದಿಂದ ಏನೂ ಪ್ರಯೋಜನವಿಲ್ಲ ನಾವೇನು ಮಾಡಿದರೆ ಈ ಅನ್ಯಾಯವನ್ನು ತಡೆಯಬಹುದು? ಅದನ್ನೇ ಈಗ ಗೋಪಾಲಮಾಸ್ತರರು ನಿಮಗೆಲ್ಲ ಹೇಳುತ್ತಾರೆ''

ವಿಮಲ ''ಏನು ಮಾಡಬೇಕು ಹೇಳಿ ಮಾಸ್ತರೇ?" ಎಂದಳು.

ಗೋಪಾಲ ಮಾಸ್ತರರು ಎದ್ದುನಿಂತು ಜುಬ್ಬದ ಕೈಯನ್ನು ಮಡಚಿಕೊಳ್ಳುತ್ತಾ ಮಾತಾಡಲು ತೊಡಗಿದರು.

''ನಾವು ಶರಾಬಿನ ಅಂಗಡಿಯ ಮುಂದೆ ಹೋಗೋಣ. ಅದರ ಮುಂದೆ ಕುಳಿತು ಕುಡಿಯುವುದಕ್ಕೆ ಬರುವವರನ್ನು ಹಿಂದಕ್ಕೆ ಕಳಿಸುವ. ನೀವೆಲ್ಲ ಅದಕ್ಕೆ ಸಿದ್ಧರಾಗಿರುವಿರೋ?''

ರಾಮನ ಹೆಂಡತಿ - ''ಸಿದ್ಧರಾಗಿದ್ದೇವೆ''

ಶ್ರೀದೇವಿ - "ಸಿದ್ಧರಾಗಿದ್ದೇವೆ"

ವಿಮಲ - "ಸಿದ್ಧರಾಗಿದ್ದೇವೆ"

ಎಲ್ಲರೂ - "ಸಿದ್ಧರಾಗಿದ್ದೇವೆ"

ಸುಮತಿ ಟೀಚರ್ ''ಎಲ್ಲರೂ ಸಿದ್ಧರಾಗಿದ್ದಾರೆ. ನಾವೀಗ ಆ ಕಡೆಗೆ ಹೋಗೋಣ"

ಗೋವಿಂದಮಾಸ್ತರರು ಎಲ್ಲರನ್ನೂ ಸಾಲಾಗಿ ನಿಲ್ಲಿಸಿದರು. ಹತ್ತಿಪ್ಪತ್ತು ಜನರಿದ್ದರು. ಸಂತೆಗೆ ತರಕಾರಿ ಖರೀದಿಸಲು ಬಂದವರೂ ಆ ಸಾಲಿನಲ್ಲಿ ಸೇರಿಕೊಂಡರು. ಮುಂದೆ ಗೋಪಾಲ ಮಾಸ್ತರರು, ಎಲ್ಲರೂ ಘೋಷಣೆಗಳನ್ನು ಕೂಗುತ್ತಾ ಹೊರಟರು.

ಜನರನು ಕೆಡಿಸಿತು ಕುಡಿತ
ಮನೆಯನು ಮುರಿಯಿತು ಕುಡಿತ।

ಕೂಲಿಯೆಲ್ಲವೂ ಕುಡಿದೇ ತೀರಿತು
ಕೂಳಿಗೂ ಗತಿ ಇಲ್ಲವಾಯಿತು॥

ಹೊಟ್ಟೆಯ ತಾಪ, ತೋಳಲಿ ಕೋಪ
ಹೆಂಡತಿ ಮಕ್ಕಳ ಮೇಲೆ ಪ್ರತಾಪ।
ದೇಹವೂ ಹಾಳು ಮನವೂ ಹಾಳು
ಮನೆ ಮಂದಿಗೆಲ್ಲ ತೀರದ ಗೋಳು॥

ಅಟ್ಟಿರಿ ಸಾರಾಯಿ ಮಾರಿಯನು
ಸುಟ್ಟುಬಿಡಿ ಪಡಖಾನೆಯನು
ಸಾರಾಯಿ ಮಾರಿಗೆ ಧಿಕ್ಕಾರ
ಶರಾಬು ಮಾರಿಗೆ ಧಿಕ್ಕಾರ ॥

ಪಾನ ವಿರೋಧೀ ಮೆರವಣಿಗೆ ಮುಂದೆ ಮುಂದೆ ಸಾಗಿತು.

***

೨. ಸ್ನೇಹ ತೋರಿದ ದಾರಿ

"ದೇವರೇ, ನನ್ನ ಕಷ್ಟಗಳನ್ನೆಲ್ಲ ದೂರಮಾಡು" ರಮಾ ಭಗವಂತನಲ್ಲಿ ಕೈಮುಗಿದು ಬೇಡಿಕೊಂಡಳು. ಅವಳಿಗರಿಯದೇ ಕಣ್ಣಲ್ಲಿ ನೀರು ತುಂಬಿತ್ತು. ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಚಿಲ್ಲರೆ ತೆಗೆದು ಆರತಿ ತಟ್ಟೆಗೆ ಹತ್ತು ಪೈಸೆ ಹಾಕಿದಳು. ದೇವಸ್ಥಾನಕ್ಕೆ ಬಂದು ದೇವರಿಗೊಂದು ಕೈಮುಗಿದು ಹೋಗಬೇಕೆಂದು ಬಹಳ ದಿನಗಳಿಂದ ಯೋಚಿಸುತ್ತಿದ್ದಳು. ಇವತ್ತು ಅದು ಕೈಗೂಡಿತ್ತು. ಶುಕ್ರವಾರದ ದಿನ ದೇವಸ್ಥಾನಕ್ಕೆ ಹೋಗಿ ಕೈಮುಗಿದರೆ ದೋಷ ಪರಿಹಾರವಾಗುವುದೆಂದು ತಾಯಿ ಹೇಳಿದ್ದರು. ತಾಯಿಯನ್ನು

ನೋಡಿ ಹೋಗಲು ಬಂದಿದ್ದಳು ರಮಾ. ಬಸ್ ಚಾರ್ಜು ಎರಡೂವರೆ ರೂಪಾಯಿ ಆಗುತ್ತಿತ್ತು. ನೆರೆಮನೆಯ ಗೋಪಿಯಿಂದ ಮೂರು ರೂಪಾಯಿ ಸಾಲ ಪಡೆದುಬಂದಿದ್ದಳು. ದೇವರಿಗೆ ಕೈ ಮುಗಿದಾಗ ಮನಸ್ಸಿಗೆ ಸ್ವಲ್ಪ ನೆಮ್ಮದಿಯಾಯಿತು.

"ಹೇ! ನೀನು ರಮಾ ಅಲ್ಲವೆ?!" ತಕ್ಷಣ ಯಾರೋ ಹೆಗಲ ಮೇಲೆ ಕೈಯಿಟ್ಟು ಕೇಳಿದಾಗ ರಮಾ ಗಾಬರಿಯಿಂದ ತಿರುಗಿ ನೋಡಿದಳು. ಹಳೆಯ ಆತ್ಮೀಯ ಗೆಳತಿ ರೇವತಿ. ತನ್ನಿಬ್ಬರು ಮಕ್ಕಳೊಂದಿಗೆ ನಿಂತಿದ್ದಳು. ರಮಾಳಿಗೆ ಅವಳನ್ನು ನೋಡಿ ಸಂತೋಷವಾಯಿತು. ರಮಾ ರೇವತಿಯ ಕೈಯನ್ನು ಹಿಡಿದುಕೊಂಡಳು. ಮಕ್ಕಳೆಡೆ ನೋಡಿದಳು. ಮುದ್ದಾದ ಮಕ್ಕಳು. ಒಬ್ಬೊಬ್ಬರನ್ನೂ ಎತ್ತಿ ಮುತ್ತಿಟ್ಟಳು. ಅವಳಿಗರಿಯದೇ ಕಣ್ಣಲ್ಲಿ ನೀರು ತುಂಬಿ ಬಂತು.



ರಮಾಳಿಗೆ ರೇವತಿಯ ಭೇಟಿಯಾಯಿತು

"ರೇವತಿ ನೀನೆಲ್ಲಿಗೆ ಹೊರಟಿದ್ದಿ?" ರಮಾ ಕೇಳಿದಳು.

"ನಾನು ಅಮ್ಮನನ್ನು ನೋಡಲು ಬಂದಿದ್ದೆ. ಅಮ್ಮನನ್ನು ನೋಡದೆ ತುಂಬಾ ಗಿನಗಳಾಗಿದ್ದವು. ಪುರುಸೊತ್ತಾಗುವುದೇ ಇಲ್ಲ. ಈ ದಿನ ಸ್ವಲ್ಪ ಬಿಡುವು ಮಾಡಿಕೊಂಡು ಬಂದೆ. ಬೇಗ ಹೋಗಬೇಕು. ನೀನೆಲ್ಲಿಗೆ ಬಂದವಳು" ರೇವತಿ ಎಂದಳು.

"ನಾನೂ ಅಮ್ಮನನ್ನು ನೋಡಿ ಹೋಗೋಣವೆಂದು ಬಂದೆ. ನಿನ್ನೆ ಬೆಳಿಗ್ಗೆ ಬಂದಿದ್ದೆ".

"ಅದೇನು ನೀನು ಇಂದೇ ಬಂದವಳು ಇಂದೇ ಹೊರಡಬೇಕಾ? ಅಷ್ಟೇನು ಅವಸರ?" ರಮಾ ಕೇಳಿದಳು.

"ಮಕ್ಕಳು ಹೊಲಿಗೆ ಕಲಿಯಲು ಬರುತ್ತಾರೆ, ಅದಕ್ಕೆ ಬೇಗ ಹೋಗಬೇಕು"

"ಹೋ! ನೀನು ಹೊಲಿಗೆ ಕ್ಲಾಸು ಮಾಡುತ್ತಿದ್ದೀಯಾ?"

"ಹೌದು. ಅದರಲ್ಲಿ ನನಗೆ ಒಳ್ಳೆ ಆದಾಯವಿದೆ. ಮಕ್ಕಳ ಬಟ್ಟೆ ಬರೆ, ಅವರ ಶಾಲೆಯ ಪುಸ್ತಕ, ಫೀಗಳ ಜೊತೆಗೆ ಮನೆಗೆ ಬೇಕಾಗುವ ಸಾಮಾನುಗಳನ್ನು ಹೊಂದಿಸುವುದೂ ಹೊಲಿಗೆಯಿಂದ ಬರುವ ಆದಾಯದಿಂದ ಸಾಧ್ಯವಾಗಿದೆ. ಅಲ್ಲದೆ ಸ್ವಲ್ಪ ಹಣವನ್ನು ರಾಷ್ಟ್ರೀಯ ಉಳಿತಾಯ ಯೋಜನೆಯಲ್ಲಿ ಕೂಡಿಟ್ಟಿದ್ದೇನೆ. ಪೋಸ್ಟಾಫೀಸಿನಲ್ಲೂ ಪ್ರತಿ ತಿಂಗಳೂ ಸ್ವಲ್ಪ ದುಡ್ಡನ್ನು ಕಟ್ಟುತ್ತಿದ್ದೇನೆ. ಹೆಣ್ಣು ಮಕ್ಕಳಲ್ಲವೇ? ವಿದ್ಯಾಭ್ಯಾಸ ಮದುವೆ ಇವುಗಳ ಬಗ್ಗೆ ಯೋಚಿಸಬೇಡವೇ?"

ಗೆಳತಿಯರು ಹಿಂದಿನ ಅನೇಕ ಸಂಗತಿಗಳನ್ನು ನೆನೆಸಿಕೊಳ್ಳುತ್ತಾ ಮುಂದೆ ಸಾಗಿದರು. ಬಸ್‌ಸ್ಟಾಪ್ ತಲುಪಿದರು. ಬಸ್ಸು ಬರಲು ಇನ್ನೂ ಅರ್ಧಗಂಟೆ ಇತ್ತು. ಮಕ್ಕಳಿಗೆ ಬಿಸ್ಕತ್ ತೆಗೆಸಿಕೊಟ್ಟಳು ರೇವತಿ. ರಮಾ ಮಾತನಾಡದೆ ಹಾಗೇ ಕುಳಿತಿದ್ದಳು.

"ಏನೇ ರಮಾ. ಯಾಕೆ ಸುಮ್ಮನೆ ಕುಳಿತುಬಿಟ್ಟೆ? ನೀನೇನು ಇಷ್ಟೊಂದು ಸೊರಗಿದ್ದೀಯಲ್ಲಾ. ನಿನ್ನ ರೂಪವೇ ಬದಲಾಗಿದೆ. ಒಳ್ಳೆ ಮೈ ಕೈ ತುಂಬಿಕೊಂಡಿದ್ದವಳು ಒಣಗಿ ಹೋಗಿರುವೆಯಲ್ಲ. ಏಕೆ ನಿನಗೆ ಆರೋಗ್ಯ ಸರಿ ಇಲ್ಲವೇ ?" ರೇವತಿ ಆತಂಕದಿಂದ ಕೇಳಿದಳು.

ರಮಾ, "ಆಂ" ಆರೋಗ್ಯವೇನೂ ಆಗಿಲ್ಲ. ಮನಸ್ಸಿನ ಚಿಂತೆಗೆ ದೇಹವೂ ಬಡವಾಗಿದೆ, ಅಷ್ಟೆ. ಕಷ್ಟ ಎಂದರೆ ಏನು ಹೇಳುವುದು! ನನ್ನ ಮನೆಯವರ ಆರೋಗ್ಯ ಸರಿಯಿಲ್ಲ. ಅವರಿಗೆ ಕ್ಷಯ. ಹಾಗಾಗಿ ಕೆಲಸಕ್ಕೆ ಹೋಗುತ್ತಿಲ್ಲ. ಅವರ ವಯಸ್ಸಾದ ತಂದೆ, ತಾಯಿ, ನಮ್ಮ ನಾಲ್ಕು ಮಕ್ಕಳು, ಇವರ ಔಷಧಿಗಳಿಗೆ ಎಷ್ಟಿದ್ದರೂ ಸಾಲದು. ಕೆಲಸಕ್ಕೆ ಹೋಗದ್ದಕ್ಕೆ, ಸಂಬಳವೂ ಖೋತ. ಅವರಿಗೆ ಆರೋಗ್ಯವಿಲ್ಲದಿದ್ದರೆ ಅವರು ಕೆಲಸಕ್ಕೆ ಹೋಗುವುದಾದರೂ ಹೇಗೆ? ಸಂಪಾದನೆ ಇಲ್ಲದೆ, ಸಂಸಾರ ನಡೆಸುವುದು ಹೇಗೆ? ನಮಗೂ ಒಂದು ಕಾಲವಿತ್ತು. ಚೆನ್ನಾಗಿ ಉಂಡುಟ್ಟು ಮಾಡುತ್ತಿದ್ದೆವು. ಕೈ ಬಿಟ್ಟು ಖರ್ಚು ಮಾಡುತ್ತಿದ್ದೆವು. ಏಕೋ, ದೇವರಿಗೆ ನಮ್ಮ ಮೇಲೆ ಮುನಿಸು ಬಂದಿದೆ. ಒಂದು ಹೊತ್ತು ಊಟಕ್ಕೆ ತತ್ವಾರ. ಏನು ಗ್ರಹಾಚಾರವೋ ಏನೋ"

"ರಮಾ ನಾನೊಂದು ಮಾತು ಕೇಳಲೆ? ನಿಮಗೆ ಸಾಕಷ್ಟು ಸಂಪಾದನೆ ಇದ್ದಾಗ ನೀನೆಷ್ಟು ಹಣ ಉಳಿತಾಯ ಮಾಡಿದ್ದೆ? ಎಲ್ಲಾ ಖರ್ಚು ಮಾಡಿಕೊಂಡು ಬಿಟ್ಟೆಯಲ್ಲವೇ? ನಿನ್ನ ಗಂಡನಿಗೆ ಇನ್ನು ಕೆಲಸ ಮಾಡಲು ಆಗದಿದ್ದರೆ, ನೀನು ಕೆಲಸ ಮಾಡಬಹುದಲ್ಲ. ನಿನ್ನ ಸಂಸಾರದ ಹೊರೆಯನ್ನು ನೀನೇ ಹೊರಬೇಕಲ್ಲವೆ? ನಿನ್ನ ಗಂಡ, ಮಕ್ಕಳ ಮೇಲೆ ನಿನಗೆ ಪ್ರೀತಿ ಇಲ್ಲವೆ? ಮಕ್ಕಳ ವಿದ್ಯಾಭ್ಯಾಸಕ್ಕೆ ಏನು ಮಾಡುತ್ತಿದ್ದೀ ಈಗ? ಏನು ಓದುತ್ತಿದ್ದಾರೆ, ಮಕ್ಕಳು?"

ರಮಾ ಹೇಳಿದಳು "ಮೊದಲನೆಯದು ಹೆಣ್ಣು. ಅವಳು ಮೂರನೆ ತರಗತಿಯವರೆಗೆ ಓದಿ, ಶಾಲೆ ಬಿಟ್ಟಳು. ಎರಡನೆಯದು ನಾಲ್ಕನೇ ಕ್ಲಾಸು. ಮೂರನೆ

ಹುಡುಗಿ ಎರಡನೇ ಕ್ಲಾಸಿನಲ್ಲಿ ಓದುತ್ತಿದ್ದಾಳೆ. ಸಣ್ಣದು ಬಾಲವಾಡಿ. ಎಲ್ಲರಿಗೂ ಪುಸ್ತಕ, ಫೀಸು ಹೊಂದಿಸುವುದರಲ್ಲಿ ಸಾಕಾಗಿ ಹೋಗುತ್ತದೆ. ನಾಲ್ಕು ದಿಕ್ಕುಗಳಲ್ಲಿಯೂ ಸಾಲ ಮಾಡಿಕೊಂಡಿದ್ದೇನೆ. ಏನು ಮಾಡುವುದೋ ದೇವರಿಗೇ ಗೊತ್ತು"

"ಎಲ್ಲವನ್ನು ದೇವರು ಕೊಡುತ್ತಾನೆಂದು ತಿಳಿದಿದ್ದೀಯಾ? ಹಿಂದೆ ಅಜ್ಜಿ ಹೇಳುತ್ತಿದ್ದುದು ನೆನಪಿದೆಯಾ! "ನಾನು ಅರ್ಧ ದೇವರು ಉಳಿದರ್ಧ" ಎಂದು. ನೀನು ಮನಸ್ಸು ಮಾಡಿದರೆ ನಿನ್ನ ಸಂಸಾರವನ್ನು ದಾರಿಗೆ ತರಬಹುದು"

"ನಾನೇನು ಮಾಡಬೇಕೆಂದು ಹೇಳುತ್ತೀ" ರಮಾ ಕೇಳಿದಳು.

"ನೀನು ಯಾವುದಾದರೂ ಕೆಲಸ ಮಾಡಬಾರದಾ? ನಿನ್ನ ಗಂಡನ ಔಷಧೋಪಚಾರಕ್ಕೆ ನೀನು ದುಡಿಯಬಾರದೇ? ನಿನ್ನ ಅತ್ತೆ ಮಾವನನ್ನು, ನಿನ್ನ ಮಕ್ಕಳನ್ನು ನೋಡಿಕೊಳ್ಳಬೇಕಾದ್ದು ನಿನ್ನ ಕರ್ತವ್ಯವಲ್ಲವೇ "ರೇವತಿ ಹೇಳಿದಳು. ರಮಾ ಮಾತನಾಡಲಿಲ್ಲ. ನಿಟ್ಟುಸಿರು ಬಿಟ್ಟಳು.

ಆಗಲೇ ಬಸ್ಸು ಬಂತು. ರೇವತಿ ಮಕ್ಕಳೊಂದಿಗೆ ಬಸ್ಸು ಹತ್ತಿದಳು. ರಮಾ ಕೂಡಾ ಬಸ್ಸು ಹತ್ತಿದಳು. ಇಬ್ಬರೂ ಅಕ್ಕಪಕ್ಕದಲ್ಲಿಯೇ ಕುಳಿತರು. ರೇವತಿ ಇಬ್ಬರ ಟಿಕೇಟನ್ನು ತಾನೇ ತೆಗೆದಳು. ರಮಾ ಏನೋ ಯೋಚಿಸುತ್ತಾ ಕಣ್ಣು ಮುಚ್ಚಿ ಕುಳಿತಿದ್ದಳು.

ರೇವತಿ ರಮಾಳನ್ನೂ ತಟ್ಟಿ ಎಬ್ಬಿಸಿದಳು "ಏನೇ ರಮಾ ನಿದ್ದೆ ಬರುತ್ತಿದೆಯಾ? ಎಷ್ಟೋ ದಿನಗಳ ನಂತರ ಭೇಟಿಯಾಗುತ್ತಿದ್ದೇವೆ. ನಿನಗೆ ನನ್ನ ಕುರಿತು ತಿಳಿದುಕೊಳ್ಳಬೇಕೆಂದಿಲ್ಲವೇ?" ರೇವತಿ ತಾನು ಹೇಗೆ ಕೆಲಸ ಮಾಡಲು ಶುರುಮಾಡಿದೆ ಎಂದು ಹೇಳತೊಡಗಿದಳು.

"ನನ್ನ ಮದುವೆ ನಿನಗೆ ನೆನಪಿರಬೇಕಲ್ಲ! ನನ್ನ ಗಂಡನಿಗೆ ಚೆಂದ ಮಾತ್ರ ಇದ್ದದ್ದು. ನನಗೆ ಇಷ್ಟವಿದ್ದು ಮಾಡಿದ ಮದುವೆಯಾಗಿರಲಿಲ್ಲ ಅದು. ಅವರಿಗೊಂದು

ನೌಕರಿಯೂ ಇರಲಿಲ್ಲ. ಅವರ ತಂದೆ ತಾಯಿ ಅಲ್ಲದೆ ಮದುವೆಯಾಗಿರದಿದ್ದ ಇಬ್ಬರು ತಂಗಿಯರೂ ಇದ್ದರು. ಹತ್ತನೇ ಕ್ಲಾಸಿನಲ್ಲಿ ಫೇಲಾದವರು ನನ್ನ ಗಂಡ. ಕೂಲಿ ಕೆಲಸಕ್ಕೂ ಹೋಗಲಾರರು. ಬರೀ ಸ್ನೇಹಿತರ ಜೊತೆ ಇಸ್ಪೀಟಾಡುವುದರಲ್ಲೇ ಕಾಲಕಳೆಯುತ್ತಿದ್ದರು.. ಮಾವ ಹೊಲಕ್ಕೆ ಕೆಲಸಕ್ಕೆ ಹೋಗುತ್ತಿದ್ದರು. ಹೇಗೋ ಮನೆ ಖರ್ಚು ಕಳೆಯುತ್ತಿತ್ತು. ಆದರೆ ನಮಗೆ ಬೇಸರವಾಗುತ್ತಿತ್ತು. ವಯಸ್ಸಾದ ತಂದೆಯನ್ನು ದುಡಿಸಿ, ನಾವು ತಿನ್ನುವಂತಾಯಿತಲ್ಲ ಎಂದು ನಾನು ನನ್ನ ಗಂಡನಿಗೆ ಸ್ನೇಹದಿಂದ ಉಪದೇಶಿಸಿದೆ. ಇಸ್ಪೀಟ್ ಆಡುವುದನ್ನು ಬಿಟ್ಟು ಏನಾದರೊಂದು ಕೆಲಸ ಮಾಡಲು ಹೇಳಿದೆ.

ನನ್ನ ತವರು ಮನೆಯವರೇ ಒಂದು ಕಂಪನಿಯಲ್ಲಿ ನನ್ನ ಗಂಡನಿಗೊಂದು ಕೆಲಸ ತೆಗೆಸಿಕೊಟ್ಟರು. ತಿಂಗಳಿಗೆ ಐದುನೂರು ರೂಪಾಯಿ ಸಂಬಳ ಬರುತ್ತಿತ್ತು. ಅದರಿಂದ ಮನೆ ಖರ್ಚಿಗೆ ಸ್ವಲ್ಪ ಅನುಕೂಲವಾಯಿತು. ಆದರೂ ಮಕ್ಕಳು ಮರಿಯಾದ ಮೇಲೆ ಖರ್ಚು ಮತ್ತೂ ಜಾಸ್ತಿಯಾಯಿತು. ತಂಗಿಯಂದಿರಿಗೆ ವರದಕ್ಷಿಣೆ ಹೊಂದಿಸುವುದಕ್ಕೂ ತುಂಬಾ ಹಣ ಸಾಲವಾಗಿತ್ತು. ಆಗ ನಾನೊಂದು ಕೆಲಸ ಹಿಡಿಯಲು ಯೋಚಿಸಿದೆ. ಮನೆಕೆಲಸದ ಜೊತೆ ಏನಾದರೊಂದು ಕಸುಬು ಮಾಡುವ ಬಗ್ಗೆ ಯೋಚಿಸಿದೆ. ಈ ವಿಷಯವನ್ನು ನನ್ನ ಗಂಡನಲ್ಲಿ ಹೇಳಿದೆ. ಮೊದಲು ಅವರಿಗೆ ಅದು ಅಷ್ಟು ರುಚಿಸಲಿಲ್ಲ. ನಾನು ಪರಿಪರಿಯಾಗಿ ಕೇಳಿಕೊಂಡಮೇಲೆ ''ಏನಾದರೂ ಮಾಡಿಕೊ'' ಎಂದರು.

ಅಂದೇ ನಾನು ಮಹಿಳಾ ಸಮಾಜದ ಕಾರ್ಯಕರ್ತರನ್ನು ಭೇಟಿಮಾಡಿ ಅವರೊಂದಿಗೆ ಮಾತನಾಡಿದೆ. ಅದರ ಅಧ್ಯಕ್ಷೆ ತುಂಬಾ ಸ್ನೇಹಮಯಿ. ಅವರು ಸ್ಥಳೀಯ ಕ್ಷೇತ್ರಾಧಿಕಾರಿಯನ್ನು ಭೇಟಿ ಮಾಡಿಸಿದರು. ಕ್ಷೇತ್ರಾಧಿಕಾರಿಗಳು ಹೊಲಿಗೆ ತರಬೇತಿ ಕೇಂದ್ರಕ್ಕೆ ನನಗೆ ಪ್ರವೇಶ ದೊರಕಿಸಿಕೊಟ್ಟರು. ಹೊಲಿಗೆ ಕಲಿತೆ. ತರಬೇತಿ ಕೇಂದ್ರದಲ್ಲಿದ್ದಾಗಲೇ ತಿಂಗಳಿಗೆ ಇನ್ನೂರು ರೂಪಾಯಿ ಸಿಗುತ್ತಿತ್ತು. ಅವರು ನಡೆಸಿದ ಪರೀಕ್ಷೆಯಲ್ಲಿ ಪಾಸಾದೆ. ಕಂತಿನ ಮೇಲೆ ಒಂದು ಹೊಲಿಗೆ ಯಂತ್ರವೂ ಸಿಕ್ಕಿತ್ತು. ಹೆಚ್ಚು ಹೆಚ್ಚು ಹೊಲಿದು ಕೊಡಲು ತೊಡಗಿದೆ. ಮತ್ತೊಂದು ಹೊಲಿಗೆ ಯಂತ್ರವನ್ನು ಕೊಂಡುಕೊಂಡೆ. ಈಗ

ಇಪ್ಪತ್ತೈದು-ಮೂವತ್ತು ಜನಕ್ಕೆ ಹೊಲಿಗೆ ಕಲಿಸುತ್ತಿದ್ದೇನೆ. ಬೇರೆಯವರಿಗೆ ಹೊಲಿದೂ ಕೊಡುತ್ತೇನೆ. ಈಗ ಎಲ್ಲಾ ಸಾಲ ತೀರಿಸಿ, ಉಳಿತಾಯವನ್ನು ಮಾಡಲು ತೊಡಗಿದ್ದೇನೆ. ಮಕ್ಕಳಿಗೆ ಒಳ್ಳೆಯ ಆಹಾರ, ಒಳ್ಳೆಯ ಬಟ್ಟೆಬರೆ ಕೊಡಲು ಈಗ ನನಗೆ ಸಾಧ್ಯವಾಗುತ್ತಿದೆ'' ಎಂದಳು.

ರೇವತಿ ತನ್ನ ಕತೆ ಮುಗಿಸುತ್ತಿದ್ದಂತೆ ಬಸ್ಸು ನಿಂತಿತು. ಮಾತಿನ ಭರದಲ್ಲಿ ಊರು ಬಂದದ್ದೇ ತಿಳಿದಿರಲಿಲ್ಲ. ಇಬ್ಬರೂ ಬಸ್ಸು ಇಳಿದರು.

ಬಸ್ಸಿನಿಂದ ಇಳಿಯುತ್ತಿದ್ದಂತೆ ಮಕ್ಕಳಿಗೆ ಅಜ್ಜಿಯ ಮನೆಗೆ ಹೊಗುತ್ತಿರುವುದೆಂದು ಗೊತ್ತಾಯಿತು. ಅವುಗಳು ಖುಷಿಯಿಂದ ಕುಣಿಯುತ್ತ ಹೆಜ್ಜೆಹಾಕಿದವು. ಅಜ್ಜಿಗೆಂದು ತೆಗೆದುಕೊಂಡಿದ್ದ ಹಣ್ಣಿದ್ದ ಬುಟ್ಟಿಯನ್ನು ದೊಡ್ಡ ಹುಡುಗಿ ತಾಯಿಯ ಕೈಯಿಂದ ತೆಗೆದುಕೊಂಡು, ತಾನೇ ಹಿಡಿದುಕೊಂಡಳು.

ರೇವತಿ ರಮಾಳಿಗೆ ಹೇಳಿದಳು ''ನೋಡು ರಮಾ ನೀನೂ ಏನಾದರೊಂದು ಕೆಲಸ ಕಂಡುಕೊಳ್ಳಬೇಕು. ಸುಮ್ಮನೆ ಚಿಂತೆ ಮಾಡುತ್ತಿರುವುದರಿಂದ ಸಮಸ್ಯೆ ಪರಿಹಾರವಾಗುವುದಿಲ್ಲ. ನನಗೆ ಇಲ್ಲಿನ ಗ್ರಾಮ ಸೇವಕರ ಪರಿಚಯವಿದೆ. ಒಮ್ಮೆ ಹೋಗಿ ಅವರನ್ನು ಕಂಡು ಮಾತನಾಡೋಣ''.

''ನೀನೇನು ಹೇಳುವುದು! ನನಗೆ ಇನ್ನು ನೌಕರಿ ಸಿಗುವುದು ಉಂಟಾ? ನಾನೇನು ಹೆಚ್ಚು ಓದಿಲ್ಲವಲ್ಲಾ''. ನಿಟ್ಟುಸಿರಿಡುತ್ತಾ ರಮಾ ಹೇಳಿದಳು.

''ನಿನಗೆ ಆಫೀಸಿನಲ್ಲಿ ನೌಕರಿ ಕೊಡುತ್ತಾರೆಂದು ಯಾರು ಹೇಳಿದರು? ಅಲ್ಲಿ ಕೆಲಸ ಮಾಡಿದರೆ ಮಾತ್ರ ಕೆಲಸವೇ? ಮನೆಯಲ್ಲೇ ಕುಳಿತು ಮಾಡುವ ಕೆಲಸಗಳು ಎಷ್ಟು ಬೇಕು ನಿನಗೆ? ಅಗೋ, ಅಲ್ಲಿ ಬರುತ್ತಿರುವುದು ರಾಜಣ್ಣನಲ್ಲವೇ? ಅವರೇ ಈ ಊರಿನ ಗ್ರಾಮಸೇವಕರು. ಬಾ, ಅವರಿಗೆ ನಿನ್ನ ಪರಿಚಯ ಮಾಡಿಕೊಡುತ್ತೇನೆ'' ರೇವತಿ ಹೇಳುತ್ತಿದ್ದಂತೆ ರಾಮಣ್ಣ ಹತ್ತಿರ ಬಂದರು.

"ನಮಸ್ಕಾರ, ಏನು ತುಂಬಾ ಅಪರೂಪವಾಗಿದ್ದೀರ? ಹೇಗೆ ನಡೀತಿದೆ ನಿಮ್ಮ ಹೊಲಿಗೆ ಕ್ಲಾಸು?"ಎಂದರು ರಾಮಣ್ಣ. "ಚೆನ್ನಾಗೇ ನಡೀತಿದೆ. ಏನೋ ನಿಮ್ಮ ಸಹಾಯದಿಂದ ನನಗೊಂದು ದಾರಿಯಾಯಿತು". ಎನ್ನುತ್ತಾ ರಮಾಳನ್ನು ತೋರಿಸಿ " ಈಕೆ ನನ್ನ ಗೆಳತಿ ರಮಾ" ಎಂದಳು.

"ನಮಸ್ಕಾರ, ತಾಯಿ" ಎಂದರು ರಾಮಣ್ಣ.

ರಮಳೂ ನಮಸ್ಕರಿಸಿದಳು.

ರೇವತಿ ಹೇಳಿದಳು"ಈಕೆಯ ಗಂಡ ಕ್ಷಯರೋಗದಿಂದ ನರಳುತ್ತಿದ್ದಾನೆ. ಅವನಿಗೆ ಕೆಲಸಕ್ಕೆ ಹೋಗಲು ಸಾಧ್ಯವಾಗುತ್ತಿಲ್ಲ. ಹಾಗಾಗಿ, ಸಂಪಾದನೆ ಸೊನ್ನೆಯಾಗಿದೆ. ಈಗ ಈಕೆಯೇ ಏನಾದರೊಂದು ಉದ್ಯೋಗಮಾಡಲು ಯೋಚಿಸುತ್ತಿದ್ದಾಳೆ. ನೀವೇ ಅವಳಿಗೊಂದು ದಾರಿ ಮಾಡಿಕೊಡಬೇಕು" ರಾಮಣ್ಣ ಯೋಚಿಸಿ ಹೇಳಿದರು. "ಸರಿ, ನಾನು ಇವರಿಗೆ ಸ್ವಂತ ಉದ್ಯೋಗ ಮಾಡಲು, ಬ್ಯಾಂಕಿನಿಂದ ಸಾಲ ಕೊಡಿಸುವ ವ್ಯವಸ್ಥೆ ಮಾಡಬಲ್ಲೆ. ಯಾವ ಉದ್ಯೋಗ ಮಾಡಬೇಕೆಂಬುದರ ಬಗ್ಗೆ ಮಾರ್ಗದರ್ಶನವನ್ನು ನಮ್ಮ ಕಾರ್ಯಾಲಯದಲ್ಲೇ ಕೊಡಿಸೋಣ ಸಾಲದೇ?"

ರೇವತಿ "ಅಷ್ಟಾದರೆ ಸಾಕು. ಈ ಕೆಲಸ ಆದಷ್ಟು ಬೇಗ ಆದರೆ ಒಳ್ಳೇದು"ಎಂದಳು.

ಇದೆಲ್ಲ ಕೇಳಿ ರಮಾಳಿಗೆ ಆಶ್ಚರ್ಯವಾಗಿತ್ತು. ಅವಳಿಗೆ ಅಚ್ಚರಿಯಿಂದ ಮಾತೇ ಹೊರಡಲಿಲ್ಲ.

ರಮಾಳ ಮನೆಯ ತೆಂಕು ದಿಕ್ಕಿನಲ್ಲಿ ವಿಶಾಲವಾದೊಂದು ಕಟ್ಟಡ ಎದ್ದಿತು. ಒಳಗೆ ಎರಡು-ಮೂರು ಕೋಣೆಗಳಿದ್ದವು. ಕೋಣೆಯ ತುಂಬಾ ಕೋಳಿಗಳು ಅಲ್ಲಲ್ಲಿ ಬಿದ್ದಿದ್ದ ಕಾಳುಗಳನ್ನು ಹೆಕ್ಕಿ ಹೆಕ್ಕಿ ತಿನ್ನುತ್ತಿದ್ದವು. ಸಣ್ಣ ಸಣ್ಣ ಪಾತ್ರೆಗಳಲ್ಲಿರಿಸಿದ್ದ



ರಮಾ ಮೊಟ್ಟೆಗಳನ್ನು ಶೇಖರಿಸುತ್ತಿದ್ದಾಳೆ

ನೀರನ್ನು ಕುಡಿಯುತ್ತಿದ್ದವು. ರಮಾ ಮೊಟ್ಟೆಗಳಿದ್ದ ಕೋಶದಿಂದ ಅವುಗಳನ್ನು ಆರಿಸಿ ಬಕೀಟಿನಲ್ಲಿ ಇಡುತ್ತಿದ್ದಳು. ಅವಳ ಮುಖದಲ್ಲಿ ಸಂತೃಪ್ತಿ ಇತ್ತು. ಮೈಕೈ ತುಂಬಿಕೊಂಡು ಚೆನ್ನಾಗಿ ಕಾಣುತ್ತಿದ್ದಳು.

ರೇವತಿ, ರಾಜಣ್ಣ ಇವರ ಮನೆ ಮುಂದೆ ಬಂದಿಳಿದರು. ರಮಾಳ ಗಂಡ ಕೋಳಿಗಳ ಕೋಣೆಯನ್ನು ಸ್ವಚ್ಛ ಮಾಡುತ್ತಿದ್ದವನು ಯಾರೆಂದು ನೋಡಲು ಹೊರಗೆ ಬಂದ. ರಮಾ ಕುಳಿತಲ್ಲಿಂದಲೇ ಅವರಿಬ್ಬರನ್ನು ನೋಡಿ, ಮೊಟ್ಟೆ ಆರಿಸುವುದನ್ನು ಬಿಟ್ಟು ಹೊರಗೋಡಿ ಬಂದಳು.

"ಏನೇ ರಮಾ, ಚೆನ್ನಾಗಿದ್ದೀಯಾ?ಹೇಗಿದೆ ಮೊಟ್ಟೆ ವ್ಯಾಪಾರ! ನೋಡು ರಾಜಣ್ಣ ಬಂದಿದ್ದಾರೆ" ಎಂದಳು ರೇವತಿ ನಗುತ್ತಾ.

"ಓ ಬನ್ನಿ, ಬನ್ನಿ ರಾಜಣ್ಣ. ನೀವಿಬ್ಬರೂ ಬಂದದ್ದು ನನಗೆ ತುಂಬಾ ಖುಷಿಯಾಯಿತು." ಎನ್ನುತ್ತಾ ರಮಾ ಅವರಿಗೆ ಕುಳಿತುಕೊಳ್ಳಲು ಕುರ್ಚಿಗಳನ್ನು ಹಾಕಿದಳು. ರಮಾಳ ಮಕ್ಕಳು ಆಗತಾನೇ ಶಾಲೆಯಿಂದ ಬಂದು ಆಟವಾಡಲು ಹೊರಬಿದ್ದವು. ರೇವತಿ ಮಕ್ಕಳನ್ನು ನೋಡಿದಳು. ಅವೂ ಮೈಕೈ ತುಂಬಿಕೊಂಡು, ಕಳೆಯಾಗಿದ್ದವು. ರಮಾ ಹೇಳಿದಳು" ರೇವತಿ, ನಿನ್ನ ಸಹಾಯದಿಂದ ನಾನೀಗ ನೆಮ್ಮದಿಯಾಗಿದ್ದೇನೆ. ನೀನು, ರಾಜಣ್ಣ ನನ್ನ ಕಣ್ಣು ತೆರೆಸಿದಿರಿ. ಮೊಟ್ಟೆ ವ್ಯಾಪಾರ ಚೆನ್ನಾಗಿ ಆಗುತ್ತಾ ಇದೆ. ಬ್ಯಾಂಕಿನ ಸಾಲದ ಕಂತನ್ನು ಕ್ರಮವಾಗಿ ಕಟ್ಟುತ್ತಿದ್ದೇನೆ. ಸ್ವಲ್ಪ ಉಳಿತಾಯವನ್ನು ಮಾಡುತ್ತಿದ್ದೇನೆ. ಮಕ್ಕಳಿಗೆಲ್ಲಾ ಒಳ್ಳೆ ಆಹಾರ, ಬಟ್ಟೆ ಕೊಡಲು ಈಗ ಸಾಧ್ಯವಾಗುತ್ತಿದೆ. ನನ್ನ ಹಿರಿಯ ಮಗಳನ್ನು ಪುನಃ ಶಾಲೆಗೆ ಸೇರಿಸಿದ್ದೇನೆ. ನನ್ನ ಗಂಡನ ಆರೋಗ್ಯವೂ ಈಗ ಸುಧಾರಿಸಿದೆ. ರಾಜಣ್ಣ ನೀವು ನಮ್ಮೂರು ಬಿಟ್ಟು ಹೋದದ್ದು ಕೇಳಿ ತುಂಬಾ ಬೇಸರವಾಯಿತು. ನೀವೀಗ ಎಲ್ಲಿದ್ದೀರಿ?"

ರಾಜಣ್ಣ ಹೇಳಿದರು "ನಾನೀಗ ಹೊಸಪೇಟೆಯಲ್ಲಿದ್ದೇನೆ. ಉದ್ಯೋಗದಲ್ಲಿ ಬಡ್ತಿ ಸಿಕ್ಕಿ, ಅಲ್ಲಿ ಕ್ಷೇತ್ರಾಭಿವೃದ್ಧಿ ಅಧಿಕಾರಿಯಾಗಿದ್ದೇನೆ. ಈಗ ರಜೆಯಲ್ಲಿ ಬಂದಿದ್ದೇನೆ. ರೇವತಿ ಸಿಕ್ಕಿದಳು. ಅವಳೇ ಇಲ್ಲಿಗೆ ಕರೆದುಕೊಂಡು ಬಂದಳು. ನಿನ್ನ ಜೀವನ ಸುಗಮವಾದದ್ದು ನೋಡಿ ತುಂಬಾ ಸಂತೋಷವಾಯಿತು"

ರಮಾ, "ಎಲ್ಲಾ ನಿಮ್ಮ ಸಹಾಯ ಸಹಕಾರದಿಂದಲೇ ಆದದ್ದು. ನಿಮ್ಮ ಸಹಾಯವನ್ನು ನಾನು ಈ ಜನ್ಮದಲ್ಲಿ ಮರೆಯಲಾಗುವುದಿಲ್ಲ" ಎಂದಳು. ರೇವತಿ, ರಾಜಣ್ಣ ಹೊರಡಲನುವಾದರು. ರಮಾ ಎರಡು ಪೊಟ್ಟಣದಲ್ಲಿ ಮೊಟ್ಟೆಗಳನ್ನು ಕಟ್ಟಿ, ಇಬ್ಬರಿಗೂ ಒಂದೊಂದು ಪೊಟ್ಟಣ ಕೊಟ್ಟಳು. ರಮಾಳ ಅತ್ತೆ ಆಗಷ್ಟೇ ಅಂಗಡಿಯಿಂದ ಸಾಮಾನು ತೆಗೆದುಕೊಂಡು ಬರುತ್ತಿದ್ದವರು, ರೇವತಿ, ರಾಜಣ್ಣರನ್ನು ನೋಡಿ ಸಂತೋಷದಿಂದ ಹೇಳಿದರು "ನಿಮ್ಮಿಂದ ನಮಗೊಂದು ದಾರಿಯಾಯಿತು. ನಿಮಗಿಬ್ಬರಿಗೂ ಒಳ್ಳೆಯದಾಗಲಿ."

ರಮಾ ಎಂದಳು "ಹೌದತ್ತೆ, ಇವಳ ಸ್ನೇಹವೇ ನನಗೆ ದಾರಿ ತೋರಿಸಿತು".

***

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ. ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು